## ಕಳೆದ ಸಂಚಿಕೆಯಲ್ಲಿ



ಸೀತಾಪುರವನ್ನು ಡಿಜಿಟಲ್ ಗ್ರಾಮವನ್ನಾಗಿಸುವ ತನ್ನ ಯೋಜನೆಯನ್ನು ವಸಂತ ಪೂಜೆಯ ಸಂದರ್ಭದಲ್ಲಿ ಸಂಜಯ್ ಊರಿನ ಜನರ ಮುಂದಿರಿಸಿದ. ಉಚಿತ ಮೊಬೈಲ್ ಪಡೆಯಲು ನೂರಾರು ಜನ ಮುಂದೆ ಬಂದರು. ವಿಶ್ವ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿ ಊರಿಗೆ ಹೊಸ ಸ್ಪರ್ಶ ನೀಡಲು ಸಂಜಯ್ ಉತ್ಸಾಹದಿಂದ ಕಾರ್ಯ ಪ್ರವೃತ್ತನಾದ. ಸೀತಾಪುರದ ಗುಡ್ಡದ ಮೇಲೆ ಟವರ್ ಸ್ಥಾಪಿಸಲು ಯೋಜನೆಯೂ ಸಿದ್ಧವಾಯಿತು. ಯೋಜನೆಯ ಮುಂದಿನ ಹಂತದ ಭಾಗವಾಗಿ, ಶೆಟ್ಟರು ಹಾಗೂ ಆನಂದಣ್ಣನೊಂದಿಗೆ ಮಂಗಳೂರಿಗೆ ಹೋದ ಸಂಜಯ್, ಸೀತಾಪುರದಲ್ಲಿ ಟವರ್ ಹಾಕುವುದಕ್ಕೆ ಸಂಬಂಧಿಸಿದಂತೆ ಮೊಬೈಲ್ ಕಂಪನಿಯೊಂದರೊಂದಿಗೆ ಒಪ್ಪಂದ ಮಾಡಿಕೊಂಡ. ಡಿಜಿಟಲ್ ಯುಗವನ್ನು ಪ್ರವೇಶಿಸಲು ಸೀತಾಪುರಕ್ಕೆ ವೇದಿಕೆ ಸಿದ್ಧವಾದಂತಾಯಿತು. ನಾಗರಿಕತೆಯ ಲೈವ್‌ಶೋನಲ್ಲಿ ತನ್ನನ್ನು ಬಿಂಬಿಸಿಕೊಳ್ಳಲು ಸೀತಾಪುರ ಸಿಂಗರಿಸಿಕೊಳ್ಳತೊಡಗಿತು.

ಇಳಿಯತೊಡಗಿದ. ಶಾಸ್ತ್ರಿಗಳ ಮನೆಯ ಹತ್ತಿರ ಬಂದವನೇ ತಿರುಗಿ ಗುಡ್ಡದ ಕಡೆಗೆ ನೋಡಿದ. ದೊಡ್ಡದಾದ ಟವರ್ ಒಂದು ಗುಡ್ಡದ ಮೇಲೆ ತಲೆಯೆತ್ತಿ ನಿಂತಿತ್ತು. ಮುಳುಗುವ ಸೂರ್ಯನ ಕಿರಣ ಆ ಟವರ್ ಮೇಲೆ ಬಿದ್ದು ಅದು ಒಮ್ಮೆಲೇ ಕೆಂಪಾಗಿ ಹೊಳೆಯುತ್ತಿತ್ತು.

ಸಂಜಯ್ ಮುಖದಲ್ಲಿ ತೃಪ್ತಿಯ ಮುಗುಳುನಗು ಬಂತು. ಶಾಸ್ತ್ರಿಗಳ ಮನೆ ಸೇರಿದವನೇ ಆಶಾಳನ್ನು ಹೊರಗೆ ಕರೆದು ಗುಡ್ಡವನ್ನು ನೋಡಲು ಹೇಳಿದ. ಆಶಾಳಿಗೂ ಇದು ದೊಡ್ಡ ಸಾಧನೆಯಾಗಿ ಕಂಡಿತು. ಪ್ರಭಾಕರನೂ ಅವರ ಸಂತೋಷದೊಂದಿಗೆ ತಾನೂ ಸ್ವರ ಸೇರಿಸಿ ಈ ಸಾಧನೆಯಲ್ಲಿ ತಾನೂ ಭಾಗಿಯಾಗಿದ್ದೇನೆಂದು ತೋರಿಸಿಕೊಂಡ.

ಆಶಾ ಆಗ ಅಲ್ಲಿಗೆ ಬಂದಿದ್ದ ಮಾದನಲ್ಲಿ ‘ನೋಡು ಮಾದ, ಟವರ್ ನೋಡು’ ಅಂತ ಸ್ವಲ್ಪ ಹೆಮ್ಮೆಯಲ್ಲಿ ಹೇಳಿದಳು. ಮಾದ ಅದನ್ನು ನೋಡಿ, ‘ಅದ್ಭುತ ಆಶಾಮ್ಮ, ಆದರೂ ನಮ್ಮ ಊರಲ್ಲಿ ದೇವಸ್ಥಾನದ ಕೊಡಿ ಮರಕ್ಕಿಂತ ಎತ್ತರದ ಮನೆಯಾಗಲೀ ಕಂಬವಾಗಲಿ ಹಾಕಿದರೆ ಊರಿಗೆ ಅಪಶಕುನ ಅಂತಾರಲ್ಲ?’ ಅಂತ ಸ್ವಲ್ಪ ಆತಂಕದಿಂದ ಕೇಳಿದ.

ಆಶಾ ‘ಮಾದ, ಕಂಬದ ಮೇಲೇನೂ ನಾವು ಮನೆ ಮಾಡುವುದಿಲ್ವಲ್ಲ. ಅಷ್ಟಕ್ಕೂ ಅದೊಂದು ಕಂಬ, ಮರದ ಹಾಗೆ. ಅದನ್ನೆಲ್ಲಾ ಬಿಡು’ ಅಂದಳು. ಮಾದ ತಲೆಯಾಡಿಸಿದ. ಮರುದಿನ ಬೆಳಗ್ಗೆ ಟೆಕ್ನಿಷಿಯನ್‌ಗಳು ಸೂರ್ಯ ಉದಯಿಸುವ ವೇಳೆಗೇ ಗುಡ್ಡಕ್ಕೆ ಹೋಗಿ ಕೆಲಸ ಪ್ರಾರಂಭ ಮಾಡಿದರು. ಸಂಜಯ್ ಬೆಳಗ್ಗಿನ ಉಪಾಹಾರ ಮುಗಿಸಿ ಹೊರಗೆ ಬರುವಾಗ ಪ್ರಭಾಕರ ಓಡುತ್ತಾ ಶಾಸ್ತ್ರಿಗಳ ಮನೆಯ ಪಕ್ಕಕ್ಕೆ ಬಂದ.

‘ಏನೋ ಓಡಿ ಬಂದೆ?’ ಕೇಳಿದ ಸಂಜಯ್.

‘ಸರ್, ನಿಯೋ ಟೆಕ್ನಿಷಿಯನ್ ಅವರು ಕೆಲಸ ಮುಗಿಸಿದ್ದಾರೆ. ಈಗ ಇಡೀ ಸೀತಾಪುರಕ್ಕೇ ಇಂಟರ್ನೆಟ್ ಸಿಗುತ್ತದೆ ಅಂತ ಹೇಳಿದರು. ನಿಮ್ಮನ್ನು ಕರ್ಕೊಂಡು ಬರ್ಲಿಕ್ಕೆ ಮಾವ ಹೇಳಿದರು’ ಪ್ರಭಾಕರ ಹೇಳಿದ.

ಸಂಜಯ್ ತನ್ನ ಫೋನ್ ಹೊರತೆಗೆದು ನೋಡಿದ.

ಅದ್ಭುತ! ಸೆಲ್ ಫೋನಲ್ಲಿ ಸಂಪೂರ್ಣ ನೆಟ್‌ವರ್ಕ್ ಸಿಕ್ಕಿತ್ತು! ತನ್ನ ಲ್ಯಾಪ್‌ಟಾಪ್ ಬಿಡಿಸಿ ಇಂಟರ್ನೆಟ್ ಕನೆಕ್ಟ್ ಮಾಡಿದ. ಎಲ್ಲವೂ ಚೆನ್ನಾಗಿಯೇ ನಡೆಯುತ್ತಿತ್ತು.

ಸಂಜಯ್ ಮುಖದಲ್ಲಿ ಸಂತೋಷ ಅರಳಿತು. ಆಶಾಳನ್ನು ಕರೆದು ಲ್ಯಾಪ್‌ಟಾಪ್‌ನಲ್ಲಿ ಹಲವಾರು ವೆಬ್ ಸೈಟುಗಳನ್ನು ತೋರಿಸಿದ. ಶಾಸ್ತ್ರಿಗಳು ‘ಇದು ಏನೋ’ ಎನ್ನುತ್ತಾ ಬಂದರು. ಶಾಸ್ತ್ರಿಗಳಿಗೂ ತನ್ನ ಸೆಲ್ ಫೋನ್ ಮತ್ತು ಲ್ಯಾಪ್‌ಟಾಪ್ ತೋರಿಸಿದ.

‘ಈಗ ಶೆಟ್ಟರ ಮನೆಗೆ ಹೋಗಬೇಕು... ಅಲ್ಲಿಂದ ಬಂದು ಆಮೇಲೆ ನಿಮಗೆ ವಿವರವಾಗಿ ತೋರಿಸ್ತೇನೆ’ ಎನ್ನುತ್ತಾ ಎಲ್ಲವನ್ನೂ ಮುಚ್ಚಿದ.

ಪ್ರಭಾಕರನ ಜೊತೆ ಸಂಜಯ್ ಶೆಟ್ಟರ ಮನೆಗೆ ತಲುಪಿದ.

‘ನಮಸ್ಕಾರ ಕಾರಂತರೇ, ನಮ್ಮ ಮ್ಯಾನೇಜರ್ ಹೊರಡುತ್ತೇನೆ ಅಂತ ಹೇಳ್ತಿದ್ದಾರೆ’ ಅಂದರು ಶೆಟ್ಟರು.

ಸಂಜಯ್ ಶೆಟ್ಟರಿಗೂ ಮ್ಯಾನೇಜರ್‌ಗೂ ನಮಸ್ಕರಿಸಿ, ‘ಇಂಟರ್ನೆಟ್ ಫಸ್ಟ್ ಕ್ಲಾಸ್ ಸಿಗುತ್ತಿದೆ. ಬಹಳ ಸಂತೋಷ. ನಿಮ್ಮ ಸಹಾಯ ಎಂದೂ ಮರೆಯಲು ಸಾಧ್ಯವಿಲ್ಲ’ ಅಂದ ಮ್ಯಾನೇಜರ್ ಕಡೆ ನೋಡಿ.

ಆ ಸಮಯ ಆನಂದಣ್ಣ ಬಂದರು. ಅವರಿಗೂ ವಿಷಯ ಕೇಳಿ ಬಹಳ ಸಂತೋಷವಾಯಿತು.

‘ಮ್ಯಾನೇಜರ್ ಅವರೇ, ಇವತ್ತು ನೀವು ಕೊಟ್ಟ ನೂರು ಸ್ಮಾರ್ಟ್‌ಫೋನ್ ವಿತರಿಸುತ್ತೇವೆ. ಅದಕ್ಕಾಗಿ ದೇವಸ್ಥಾನದ ಪ್ರಾಂಗಣದಲ್ಲಿ ನಾನು ಒಂದು ಸಮಾರಂಭ ಇಟ್ಟುಕೊಂಡಿದ್ದೇನೆ. ನೀವು ನಿಂತು ನಿಮ್ಮ ಕೈಯಲ್ಲಿ ಸ್ಮಾರ್ಟ್‌ಫೋನ್ ಕೊಟ್ಟರೆ ಒಳ್ಳೆಯದಿತ್ತು’ ಅಂದರು ಆನಂದಣ್ಣ. ಶೆಟ್ಟರೂ ಅದಕ್ಕೆ ದನಿಗೂಡಿಸಿದರು.

ಮ್ಯಾನೇಜರ್‌ಗೆ ಬಹಳ ಸಂತೋಷವಾಯಿತು. ‘ಆಯಿತು, ನೀವು ಹೇಳಿದರೆ ಇಲ್ಲ ಹೇಳ್ಲಿಕ್ಕೆ ಆಗ್ತದಾ?’ ಅಂದರು ಮ್ಯಾನೇಜರ್.

ಆನಂದಣ್ಣ ದೇವಸ್ಥಾನಕ್ಕೆ ಹೋಗಿ ಕಾರ್ಯಕ್ರಮಕ್ಕೆ ತಯಾರು ಮಾಡುತ್ತೇನೆ ಅಂದರು. ಹಾಗೇ ನಿಯೋದ ಒಬ್ಬ ಸೇಲ್ಸ್‌ಮ್ಯಾನ್ ಅನ್ನೂ ಕರಕೊಂಡು ಆನಂದಣ್ಣ ದೇವಸ್ಥಾನಕ್ಕೆ ಹೊರಟರು. ಸಮಾರಂಭಕ್ಕೆ ಮೊದಲೇ ಎಲ್ಲಾ ಸ್ಮಾರ್ಟ್‌ಫೋನ್ ತೆಗೆದುಕೊಳ್ಳುವ ಜನರನ್ನು ಕರೆದು ಅವರ ಹೆಸರಲ್ಲಿ ‘ಸಿಮ್ ರಿಜಿಸ್ಟ್ರೇಷನ್’ ಮಾಡಬೇಕಿತ್ತು. ಆ ಕೆಲಸ ದೇವಸ್ಥಾನದಲ್ಲಿ ಪ್ರಾರಂಭವಾಯಿತು.

ಇತ್ತ ಶೆಟ್ಟರು ಮ್ಯಾನೇಜರ್ ಮತ್ತು ಸಂಜಯನನ್ನು ಕರಕೊಂಡು ತಮ್ಮ ಹೊಲದ ಹಾಗೂ ಗುಡ್ಡದ ಕಡೆಗೆ ಹೊರಟರು. ಅಲ್ಲಿ ಕೆಲವು ಜನ ಕಾಟೇಜ್ ಮಾಡಲು ತಯಾರು ಮಾಡುತ್ತಿದ್ದರು. ಮೊದಲಿಗೆ ಆ ಸಣ್ಣ ಗುಡ್ಡದ ಮೇಲೆ ಸರಿಯಾದ ಜಾಗ ನೋಡಿ ಜಾಗವನ್ನು ಸಮತಟ್ಟು ಮಾಡಬೇಕಿತ್ತು. ಕೆಲವು ಕೆಲಸಗಾರರು ನೆಲ ಸಮತಟ್ಟು ಮಾಡಿ ಅಡಿಪಾಯ ಹಾಕುವ ತಯಾರಿಯಲ್ಲಿದ್ದರು.

ಶೆಟ್ಟರು ಈ ಕೆಲಸದ ಪ್ರಗತಿಯನ್ನು ಸಂಜಯನಿಗೆ ತೋರಿಸಿದರು.

‘ಶೆಟ್ರೇ, ನಾನೇ ಫಾಸ್ಟ್ ಮನುಷ್ಯ ಅಂದುಕೊಂಡರೆ ನೀವು ನನಗಿಂತ ಫಾಸ್ಟ್ ಮನುಷ್ಯ’ ಎನ್ನುತ್ತಾ ಶೆಟ್ಟರನ್ನು ಅಭಿನಂದಿಸಿದ ಸಂಜಯ್.

ಆಗ ಅವರ ಹಿಂದೆ ಬಂದ ಪ್ರಭಾಕರ ಬೇಗ ಬೇಗನೆ ಫೋಟೊ ತೆಗೆಯಲು ಶುರು ಮಾಡಿದ. ಸಂಜಯ್ ಪ್ರಭಾಕರನಿಗೆ, ‘ಪ್ರಭಾಕರ, ಇಲ್ಲಿ ಫೋಟೊ ತೆಗೆಯುವುದು ಮುಗಿದರೆ ದೇವಸ್ಥಾನದ ಕಡೆಗೆ ಹೋಗು. ಅಲ್ಲಿ ‘ಸಿಮ್ ರಿಜಿಸ್ಟ್ರೇಷನ್’ ಆಗುತ್ತಿದೆ... ಅದರ ವಿಡಿಯೊ ಮಾಡು. ಇವತ್ತು ಸಂಜೆ ನಮ್ಮ ಕಾರ್ಯಕ್ರಮ ಇದೆ. ಹಾಗೇ ನಾನು ಸ್ಮಾರ್ಟ್‌ಫೋನ್ ಉಪಯೋಗಿಸುವುದು ಹೇಗೆ ಮತ್ತೆ ಸೋಶಿಯಲ್ ಮೀಡಿಯಾ ಏನು ಇತ್ಯಾದಿ ಪಾಠ ಮಾಡಲಿಕ್ಕಿದ್ದೇನೆ’ ಅಂದ.

ಪ್ರಭಾಕರ ಬೇಗ ಬೇಗನೆ ದೇವಸ್ಥಾನದ ಕಡೆ ಹೋಗತೊಡಗಿದ.

ಅವನನ್ನು ನೋಡಿ ಶೆಟ್ಟರು ಸಂಜಯ್ ಕಡೆಗೆ ತಿರುಗಿ ಕೈಮುಗಿದು, ‘ಕಾರಂತರೇ, ನೀವೊಬ್ಬರು ಮಾಂತ್ರಿಕರೇ ಸರಿ ಸ್ವಾಮಿ! ಈ ನನ್ನ ಅಳಿಯ ಸೋಮಾರಿಯಾಗಿ ಗದ್ದೆಯಲ್ಲಿ ತಿರುಗುತ್ತಿದ್ದು, ನನ್ನ ತಂಗಿಯ ತಲೆಬಿಸಿಗೆ ಕಾರಣವಾಗಿದ್ದ. ಈಗ ನೋಡಿ, ಭಯಂಕರ ಚುರುಕಾಗಿದ್ದಾನೆ. ನೀವು ದೇವರ ಹಾಗೆ ನಮ್ಮೂರಿಗೆ ಬಂದು ಎಲ್ಲರನ್ನೂ ಬದಲಿಸುತ್ತಿದ್ದೀರಿ’ ಅಂದರು.

ಸಂಜಯ್ ತನ್ನ ವಿನಯ ತೋರಿಸುತ್ತಾ ‘ಎಲ್ಲಾ ಅವರವರ ಯೋಗ್ಯತೆ’ ಅಂದ. ಮತ್ತೆ ಎಲ್ಲರೂ ಶೆಟ್ಟರ ಮನೆಗೆ ಹಿಂತಿರುಗಿದರು.

ಸಂಜೆ ಸಂಜಯ್ ದೇವಸ್ಥಾನಕ್ಕೆ ಹೊರಟು ನಿಂತ. ಆಶಾ ಕೂಡಾ ಅವನ ಜೊತೆ ಹೊರಟಳು. ದೇವಸ್ಥಾನದಲ್ಲಿ ನೂರಾರು ಜನರು ಸೇರಿದ್ದರು. ಸಣ್ಣ ವೇದಿಕೆ ನಿರ್ಮಿಸಲಾಗಿತ್ತು. ಆನಂದಣ್ಣ ಬಿಳಿಯಾದ ಶಾಲು ಹೊದೆದುಕೊಂಡು ವೇದಿಕೆಯಲ್ಲಿ ಓಡಾಡುತ್ತಿದ್ದರು. ವೇದಿಕೆಯಲ್ಲಿ ಶೆಟ್ಟರು, ನಿಯೋದ ಮ್ಯಾನೇಜರ್ ಮಾತ್ರ ಇದ್ದರು. ಸಂಜಯನನ್ನು ನೋಡಿದಕೂಡಲೇ ಆನಂದಣ್ಣ ವೇದಿಕೆಯಿಂದ ಇಳಿದು ಬಂದು ಸಂಜಯನನ್ನು ವೇದಿಕೆಗೆ ಕರೆದೊಯ್ದು ಕುರ್ಚಿಯಲ್ಲಿ ಕೂರಿಸಿದರು.